**ಸಿಸಿ ಸಂಃ 2712/2020**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ವರುಣ್ ಕುಮಾರ್ ಎಸ್.ವಿ | ಪಿ ಡಬ್ಲ್ಯೂ -6 ಸಿ ಡಬ್ಲ್ಯೂ - 8 |
| ತಂದೆ ಹೆಸರುಃ ವಸುದೇವ ರೆಡ್ಡಿ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ:19.12.2025 |
| ವಯಸ್ಸುಃ 42 ವರ್ಷ | |
| ವೃತ್ತಿಃ ವಲಯ ಅರಣ್ಯಾಧಿಕಾರಿ | |
| ವಾಸ ಸ್ಥಳಃ ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2018 ರಿಂದ ಜುಲೈ 2021 ರವರೆಗೆ ಹೊಸಕೋಟೆಯ ವಲಯ ಅರಣ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿ:05.08.2019 ರಂದು ತಿರುಮಲಶೆಟ್ಟಿಹಳ್ಳಿ ಪೋಲಿಸ್ ಠಾಣೆಯವರು 40 ರಕ್ತ ಚಂದನದ ಮರದ ತುಂಡುಗಳನ್ನು ನನ್ನ ಮುಂದೆ ಹಾಜರುಪಡಿಸಿ, ಅವುಗಳನ್ನು ಪರಿಶೀಲಿಸಿ, ಅವುಗಳು ಯಾವ ಜಾತಿ ಎಂದು ವರದಿಯನ್ನು ಕೇಳಿರುತ್ತಾರೆ, ಅದರಂತೆ ನಾನು 40 ರಕ್ತ ಚಂದನದ ಕಾಂಡ ರಚನೆ, ಬಣ್ಣ, ಪ್ರಾಕೃತಿಕ ಗುಣ ಧರ್ಮವನ್ನು ಪರಿಶೀಲನೆ ಮಾಡಿ, ಅವುಗಳು ರಕ್ತಚಂದನದ ಮರದ ತುಂಡುಗಳು ಎಂದು ದೃಢೀಕರಿಸಿ, ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೃಢೀಕರಣ ಪತ್ರ ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದೃಢೀಕರಣ ಪತ್ರವನ್ನು **Ex.P-4** ಎಂದು, ಸಾಕ್ಷಿಯ ಸಹಿಯನ್ನು **Ex.P-4(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾಲುನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ.ಹೆಚ್.ಎಂ ವಕೀಲರಿಂದ :</u>**

ಮರದ ತುಂಡುಗಳನ್ನು ಪೋಲಿಸರು ನಮ್ಮ ಕಚೇರಿಗೆ ತಂದಿದ್ದರು. ಮರದ ತುಂಡುಗಳನ್ನು ಯಾವ ವ್ಯಕ್ತಿಯಿಂದ ಮತ್ತು ಯಾವ ಸ್ಥಳದಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನಿ.ಪಿ.4 ರಲ್ಲಿ ನಮೂದು ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು, ಪೋಲಿಸರು ನೀಡಿದ ಪತ್ರದಲ್ಲಿ ಅದನ್ನು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮು.ಮಾಲು-1 ರಲ್ಲಿ ನಾನು ಪರಿಶೀಲನೆ ಮಾಡಿದ್ದೇನೆ ಎಂಬುದರ ಬಗ್ಗೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಪೋಲಿಸರ ಹೇಳಿಕೆಯ ಮೇಲೆ ಪೋಲಿಸರಿಗೆ ಅನೂಕಲವಾಗಲೀ ಎಂದು ನಾನು ಯಾವುದೇ ಮರದ ತುಂಡುಗಳ ಪರಿಶೀಲನೆ ಮಾಡದೇ ಸುಳ್ಳು ದೃಢೀಕರಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಮೇಲಿನ ಪಾಟೀ ಸವಾಲನ್ನು 1 ನೇ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳುತ್ತಾರೆ.**

**<u>ಮರು ವಿಚಾರಣೆಃ</u>** <u>ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ.